ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-3 Issue 2, Sep-Oct, 221-225**
**©*IIMRD*, Mysuru**
IIMRD JOURNALS
**www.iimrd.com**

# ಮೈಸೂರಿನ ಒಡೆಯರ ಸ್ಮಾರಕಗಳು

**ಡಾ. ಜಯರಾಮು***

*ಇತಿಹಾಸ ಉಪನ್ಯಾಸಕರು, ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.

***ಸಾರಾಂಶ (Abstract)***

*ಮೈಸೂರು ಎಂದರೆ ಚರಿತ್ರೆಯಲ್ಲಿ ಒಂದು ರೀತಿಯಲ್ಲಿ ರೋಮಾಂಚನ, ಆಹ್ಲಾದ, ಹಲವು ಅದ್ಭುತವಾದ ಕೆಲಸ ಕಾರ್ಯಗಳಿಗೆ ಖ್ಯಾತಿಯಾಗಿದೆ. ಒಂದಲ್ಲ ಒಂದು ಕ್ಷೇತ್ರದಲ್ಲಿ ಅಮೋಘವಾದ ಸಾಧನೆ ಮತ್ತು ಪ್ರಗತಿಯನ್ನು ಸಾಧಿಸಿದೆ. ಇಂತಹ ಅಭೂತಪೂರ್ವವಾದ ಸಾಧನೆಗೆ ಸೃಷ್ಠಿಕರ್ತರು ಮೈಸೂರಿನ ಅರಸರು. ನಾಡಿನ ಏಳಿಗೆಗಾಗಿ ಮಾಡಿದ ಅಪಾರವಾದ ಸೇವೆಯನ್ನು ಸ್ಮರಿಸುತ್ತಾ ಅವರ ಕೀರ್ತಿ ಪತಾಕೆಗಳು ಮತ್ತಷ್ಟು ವಿಜೃಂಬಿಸಲಿ ಎಂಬ ಉದ್ದೇಶದಿಂದ ಅವರಲ್ಲಿ ಕೆಲವು ಮಹನೀಯರಿಗೆ ಸ್ಮಾರಕಗಳನ್ನು ನಿರ್ಮಿಸಿರುವುದನ್ನು ನಾವು ಕಾಣಬಹುದಾಗಿದೆ.*

***ಮುಖ್ಯಪದಗಳು (Keywords)*:** ಮೈಸೂರು ಒಡೆಯರು, ಪ್ರತಿಮೆ, ಸ್ಮಾರಕಗಳು.

**ಪೀಠಿಕೆ**

ಮೈಸೂರಿನ ಒಡೆಯರು–ನಾಡಿನ ಜನತೆಗೆ ಅವಿಸ್ಮರಣೀಯವಾದ ಸೇವೆಯನ್ನು ತಮ್ಮ ಆಡಳಿತಾವಧಿಯಲ್ಲಿ ಸಲ್ಲಿಸಿದ್ದಾರೆ. ಮೈಸೂರು ಸುಂದರ ನಗರ, ಅರಮನೆಗಳ ಬೀಡು, ಸಾಂಸ್ಕೃತಿಕ ಚಟುವಟಿಕೆಗಳ ತಾಣ ಎಂಬ ಹೆಸರುಗಳನ್ನು ಪಡೆಯಲು ಮೂಲ ಕಾರಣ ಮೈಸೂರಿನ ಒಡೆಯರು ಮತ್ತು ಅವರು ನಾಡಿಗೆ ಸಲ್ಲಿಸಿದ ಸೇವೆ. ನಾಡಿನ ಏಳಿಗೆಗಾಗಿ ಮಾಡಿದ ಅಪಾರವಾದ ಸೇವೆಯನ್ನು ಸ್ಮರಿಸುತ್ತಾ ಅವರ ಕೀರ್ತಿ ಪತಾಕೆಗಳು ಮತ್ತಷ್ಟು ವಿಜೃಂಬಿಸಲಿ ಮತ್ತು ಅವರ ಸಾಧನೆಗಳು ಇತರರಿಗೆ ಮಾದರಿಯಾಗಲಿ ಎಂಬ ಉದ್ದೇಶದಿಂದ ಅರಸರ ಪ್ರತಿಮೆಗಳನ್ನೊಳಗೊಂಡಂತೆ ಅನೇಕ ಸ್ಮಾರಕಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ರಾಜರು ಮತ್ತು ದಿವಾನರುಗಳಿಗೆ ಸಂಬಂಧಪಟ್ಟ ಹಾಗೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್, ದೊಡ್ಡಗಡಿಯಾರ, ಚಿಕ್ಕಗಡಿಯಾರ ಇನ್ನೂ ಹಲವಾರು ಸ್ಮಾರಕಗಳು ಮೈಸೂರಿನಲ್ಲಿ ಕಾಣಸಿಗುತ್ತವೆ.

**ಚಾಮರಾಜ ಒಡೆಯರ ಪ್ರತಿಮೆ**

ಮೈಸೂರು ಸಂಸ್ಥಾನದ ಹೃದಯ ಭಾಗದಲ್ಲಿ ಕಾಣಸಿಗುವಂತಹ ಪ್ರತಿಮೆಯಿದು. ಇದು ಮೈಸೂರು ಸಂಸ್ಥಾನವನ್ನಾಳಿದ ಇಪ್ಪತ್ತೂರನೆಯ ರಾಜನಾದ ಒಂಭತ್ತನೆಯ ಚಾಮರಾಜ ಒಡೆಯರ್‌ರವರ

*Please cite this article as: ಜಯರಾಮು (2021).* ಮೈಸೂರಿನ ಒಡೆಯರ ಸ್ಮಾರಕಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2).* ಪು.ಸಂ. 221–225

ನೆನಪಿನಾರ್ಥವಾಗಿ ಸ್ಥಾಪಿಸಿದ ಪ್ರತಿಮೆಯಾಗಿದೆ. ಚಾಮರಾಜ ಒಡೆಯರ್‌ರವರು ಮೈಸೂರು ಸಂಸ್ಥಾನದ ಶಿಲ್ಪಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ತಂದೆ. ಈ ಭವ್ಯ ಪ್ರತಿಮೆ ಮೈಸೂರು ಅರಮನೆಯ ಉತ್ತರ ಪ್ರವೇಶದ್ವಾರ ಮತ್ತು ದೊಡ್ಡಗಡಿಯಾರ ವೃತ್ತದ ನಡುವೆ ಇರುವಂತಹದು. ಯಾವಾಗಲೂ ಜನದಟ್ಟನೆಯಿರುವ ಆಲ್ಬರ್ಟ್ ವಿಕ್ಟರ್ ರಸ್ತೆ ಮತ್ತು ಅಶೋಕ ರಸ್ತೆಯನ್ನು ಕೂಡುವ ವಿಶಾಲವಾದ ವೃತ್ತದಲ್ಲಿ ಉತ್ತರಾಭಿಮುಖವಾಗಿ ಸ್ಥಾಪನೆಯಾಗಿದೆ. ಈ ಪ್ರತಿಮೆಯಿಂದಾಗಿ ಆ ಸ್ಥಳಕ್ಕೆ ಚಾಮರಾಜ ವೃತ್ತ ಎಂಬ ಹೆಸರು ಬಂದಿತ್ತು ಮತ್ತು ಮೈಸೂರಿನ ಜನತೆಯ ಬಾಯಿಯಲ್ಲಿ ಚಿರಪರಿಚಿತವಾಗಿದೆ. ಇದನ್ನು ಅಮೃತಶಿಲೆಯಲ್ಲಿ ನಿರ್ಮಿಸಲಾಗಿದೆ. ಮೈಸೂರು ನಗರದಲ್ಲಿ ಕಾಣಸಿಗುವ ಪ್ರತಿಮೆಗಳಲ್ಲೆಲ್ಲ ಅತ್ಯಂತ ಸುಂದರವಾದದ್ದು ಮತ್ತು ಆಕರ್ಷಣೆಯವಾದುದ್ದಾಗಿದೆ.

ಈ ವೃತ್ತದ ಮಧ್ಯಭಾಗದಲ್ಲಿ ಬಿಳಿ ಅಮೃತಶಿಲೆಯ ಮಂಟಪವನ್ನು ನಿರ್ಮಿಸಿ, ಅದರಲ್ಲಿ ನಾಲ್ಕಾರು ಕಲ್ಲಿನ ಮೆಟ್ಟಿಲುಗಳನ್ನು ಹಾಗೂ ಸುತ್ತಲೂ ಕಬ್ಬಿಣದ ಸರಳುಗಳಿಂದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಇದರ ಮಧ್ಯಭಾಗದಲ್ಲಿ ಚಾಮರಾಜ ಒಡೆಯರ್‌ರವರ ಎಂಟು ಅಡಿ ಎತ್ತರದ ಬೃಹತ್ ಪ್ರತಿಮೆಯನ್ನು ನಿಲ್ಲಿಸಲಾಗಿದೆ. ಮಂಟಪದ ಸುತ್ತಲೂ ಬಿಳಿ ಅಮೃತಶಿಲೆಯ ನಾಲ್ಕು ಕಂಬಗಳು ಕಂಡುಬರುತ್ತವೆ. ಅವುಗಳಲ್ಲಿ ಹೂಮಾಲೆಗಳ ಚಿತ್ರಗಳನ್ನು ಚಿತ್ರಿಸಲಾಗಿದೆ. ಮಂಟಪದ ವಿಶೇಷತೆಯೆಂದರೆ ಮಂಟಪದ ಮೇಲೊಂದು ಸಣ್ಣ ಗೋಪುರವಿದೆ. ಅದಕ್ಕೆ ಚಿನ್ನದ ಲೇಪನಮಾಡಲಾಗಿದೆ. ಮಂಟಪಕ್ಕೆ ಸೊಬಗು ಎಂಬಂತೆ ಮಂಟಪ ನಾಲ್ಕು ಕಂಬಗಳ ತುದಿಗಳಲ್ಲೂ ದೊಡ್ಡ ಗಾತ್ರದ ದೀಪಗಳು, ಇವುಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು ಇದು ಇಡೀ ಸಾಂಸ್ಕೃತಿಕ ನಗರಿ ಮೈಸೂರಿಗೆ ವಿಶೇಷವಾದ ಸೊಬಗನ್ನು ನೀಡುತ್ತದೆ ಹಾಗೂ ಇಂಡೋಸೆರ್ಸಾನಿಕ್ ಶೈಲಿಯನ್ನು ಒಳಗೊಂಡ ಪ್ರತಿಮೆಯನ್ನು 1920ರಲ್ಲಿ ಸ್ಥಾಪಿಸಲಾಯಿತ್ತು.[1]

**ಕೃಷ್ಣರಾಜ ಒಡೆಯರ್‌ರವರ ಪ್ರತಿಮೆ**

ಮೈಸೂರು ಸಂಸ್ಥಾನವನ್ನು ವಿಶ್ವದ ಚರಿತ್ರೆಯಲ್ಲಿ ಚಿರಸ್ಥಾಯಿಯಾಗುವಂತೆ ಮತ್ತು ಮೈಸೂರು ಸಂಸ್ಥಾನವನ್ನು ಸರ್ವತೋಮುಖ ಪ್ರಗತಿಯಡೆಗೆ ಕೊಂಡೊಯ್ದ ಮೈಸೂರು ಸಂಸ್ಥಾನದ ಇಪ್ಪತ್ತನಾಲ್ಕನೆಯ ದೊರೆಯಾದ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರತಿಮೆಯನ್ನು ಅರಮನೆಯ ವಾಯುವ್ಯ ಭಾಗದಲ್ಲಿ ಹಾಗೂ ಮೈಸೂರು ನಗರದ ಹೃದಯ ಭಾಗದಲ್ಲಿ ವಿಶಾಲವಾದ ವೃತ್ತದ ಮಧ್ಯಭಾಗದಲ್ಲಿ ಸ್ಥಾಪಿತವಾಗಿದೆ. ಇದರಿಂದಾಗಿ ಈ ವೃತ್ತವು 'ಕೆ.ಆರ್. ಸರ್ಕಲ್' (ಕೃಷ್ಣರಾಜ ವೃತ್ತ) ಎಂದು ಚಿರಪರಿಚಿತವಾಗಿದೆ. ಇದನ್ನು ಬಿಳಿಯ ಅಮೃತ ಶಿಲೆಯಲ್ಲಿ ನಿರ್ಮಿಸಲಾಗಿದೆ. ಈ ಪ್ರತಿಮೆಯು ಕೂಡ ಚಾಮರಾಜ ಒಡೆಯರ ಪ್ರತಿಮೆಯಂತೆ ಘನತೆ–ಗಾಂಭೀರ್ಯ ಮತ್ತು ಮೈಸೂರಿನ ಪರಂಪರೆಯನ್ನು ಸಾರುತ್ತದೆ. ಏಕೆಂದರೆ ರಾಜರ್ಷಿ ಎಂಬ ಬಿರುದನ್ನು ಪಡೆದ ನಾಲ್ವಡಿಯವರ ವ್ಯಕ್ತಿತ್ವ, ವರ್ಚಸ್ಸು ಈ ಪ್ರತಿಮೆಯಲ್ಲಿ ಕಂಡುಬರುತ್ತದೆ. ಇದನ್ನು ನಿರ್ಮಿಸಿದವರು ಜಯಚಾಮರಾಜೇಂದ್ರ ಒಡೆಯರ್‌ರವರು ಇದರ ಶಿಲ್ಪಿ ಸಿ.ಕಾಮತ್ ಮತ್ತು ಮೈಸೂರಿನ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ಅಕ್ಟೋಬರ್ 16. 1952ರಂದು ಉದ್ಘಾಟಿಸಿದರು. ಮಂಟಪದ ಸುತ್ತಲೂ ಷಷ್ಟಕೋನಾಕಾರವಾಗಿ ಗ್ರಾನೈಟ್ ಶಿಲೆಯಿಂದ ಮೆಟ್ಟಿಲುಗಳನ್ನು ನಿರ್ಮಿಸಲಾಗಿದ್ದು ಅವುಗಳಿಗೆ ಕೈಪಿಡಿಯನ್ನು ಕಟ್ಟಲಾಗಿದೆ. ಈ ಪ್ರತಿಮೆಯ ಮಂಟಪಕ್ಕೆ ಒಟ್ಟು ಆರು ಗ್ರಾನೈಟ್ ಶಿಲೆಯ

ಕಂಬಗಳಿದ್ದು, ಮೇಲೊಂದು ಕೆಂಪುಕಲ್ಲಿನ ಆಕರ್ಷಕ ಗೋಪುರ ಮತ್ತು ಕಳಶವಿದೆ. ನಾಲ್ವಡಿ ಕೃಷ್ಣರಾಜರ ಪ್ರತಿಮೆ ಸುಮಾರು ಎಂಟು ಅಡಿ ಎತ್ತರವಾಗಿದೆ.[2] ಇಡೀ ಮೈಸೂರು ನಗರಕ್ಕೆ ಮೆರುಗು ನೀಡುತ್ತಿದೆ. ಈ ವೃತ್ತದಲ್ಲಿ ಯಾವಾಗಲೂ ಜನಸಂದಣಿಯನ್ನು ಕಾಣಬಹುದು. ಒಂದು ಮಹಾನಗರ ಪಾಲಿಕೆಯ ಕಡೆಗಿನ ಸಯ್ಯಾಜಿರಾವ್ ರಸ್ತೆ, ಅರಸು ರಸ್ತೆ, ಚಾಮರಾಜ ವೃತ್ತದ ರಸ್ತೆಯನ್ನು ಒಳಗೊಂಡು ಚತುಷ್ಕೋನ ರಸ್ತೆಯ ಮಧ್ಯಭಾಗದಲ್ಲಿದೆ.

**ಚಿಕ್ಕಗಡಿಯಾರ**

ಮೈಸೂರು ಸಂಸ್ಥಾನದಲ್ಲಿ ಚಿಕ್ಕಗಡಿಯಾರ ಎಂದೇ ಪರಿಚಿತವಾಗಿರುವ ಈ ಗಡಿಯಾರವು ದೇವರಾಜ ಮಾರುಕಟ್ಟೆಯ ದಕ್ಷಿಣ ಭಾಗದ ಸ್ಥಳದಲ್ಲಿದೆ. ಈಗ ಅದಕ್ಕೆ ಇಟ್ಟಿರುವ ಹೆಸರು ವಾಸವಿ ವೃತ್ತ ಎಂಬುದು ಇದರ 'ಉತ್ತರಕ್ಕೆ ದೇವರಾಜ' ಮಾರುಕಟ್ಟೆ, ಪೂರ್ವಕ್ಕೆ ಸಯ್ಯಾಜಿರಾವ್ ರಸ್ತೆ, ಪಶ್ಚಿಮಕ್ಕೆ ಶಿವರಾಂ ಪೇಟೆ, ದಕ್ಷಿಣದಲ್ಲಿ ಬಹುಮಳಿಗೆಗಳ ಮಾರಾಟದ ಅಂಗಡಿಗಳ ಸಮುಚ್ಚಯ ಒಟ್ಟಾರೆಯಾಗಿ ಇದು ಜನಸಂದಣಿಯ, ಸಾರ್ವಜನಿಕ ಸಂಚಾರ ದಟ್ಟವಾಗಿರುವ ಸ್ಥಳದಲ್ಲಿ ನಿರ್ಮಾಣವಾಗಿದೆ. ಈ ಗಡಿಯಾರವನ್ನು ವೈಸರಾಯ್ ಲಾರ್ಡ್‌ರಫರಿನ್ 10ನೇ ಚಾಮರಾಜೇಂದ್ರ ಒಡೆಯರ್‌ರವರ ಕಾಲದಲ್ಲಿ ಮೈಸೂರಿಗೆ ಬಂದುದರ ನೆನಪಿನಾರ್ಥವಾಗಿ ಕಟ್ಟಿಸಿದುದರಿಂದ ಇದಕ್ಕೆ ಡಫರಿನ್ ಗಡಿಯಾರ ಎಂಬ ಹೆಸರು ಬಂತು.[3] ಈ ಗಡಿಯಾರವು ಫ್ರೆಂಚ್ ಶಿಲ್ಪಕಲಾ ಶೈಲಿಯಿಂದ ನಿರ್ಮಿತವಾಗಿದೆ. ಕ್ಷೇತ್ರ ಕಾರ್ಯಕ್ಕೆ ಹೋದಂತಹ ಸಮಯದಲ್ಲಿ ಕಂಡುಬಂದ ವಿಚಾರವೆಂದರೆ ಈ ಗೋಪುರದ ಕೆಳಭಾಗದಲ್ಲಿ ನಾಲ್ಕು ಕಡೆಯು ಬರಹ ರೂಪದಲ್ಲಿ ಕೆತ್ತಲಾಗಿದ್ದು ಪಶ್ಚಿಮ ಭಾಗದಲ್ಲಿ ಸಂಸ್ಕೃತ, ಪೂರ್ವದಲ್ಲಿ ಕನ್ನಡ, ದಕ್ಷಿಣದಲ್ಲಿ ಇಂಗ್ಲಿಷ್, ಉತ್ತರದಲ್ಲಿ ಪರ್ಷಿಯನ್ ಭಾಷೆಯನ್ನು ಬಳಸಿ ಬರಹ ಕೆತ್ತಿರುವುದು ಕಾಣಸಿಗುತ್ತದೆ. ಕನ್ನಡದಲ್ಲಿನ ಬರಹ ಈ ರೀತಿಯಿದೆ. ಶಾಲಿವಾಹನ ಶಕೆಯ 1809ನೇ ವ್ಯಯನಾಮ ಸಂವತ್ಸರದ ಮಾರ್ಗಶಿರ ಶುದ್ಧ ಷಷ್ಠಿಯಲ್ಲಿ ಮೈಸೂರು ನಗರಕ್ಕೆ ಭಾರತದ ದೇಶದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಲಾರ್ಡ್ ಡಪರಿನ್ ಸಾಹೇಬರು ಬಂದ ನೆನಪಿಗಾಗಿ ಶ್ರೀ ಚಾಮರಾಜ ಒಡೆಯರ್ ಬಹದ್ದೂರ್‌ರವರಿಂದ ಈ ಜಲಯಂತ್ರವು ಸ್ಥಾಪಿಸಲ್ಪಟ್ಟಿತ್ತು ಎಂದಿದೆ ಕನ್ನಡ ಶಾಸನ, This Fountain was erected by his Highness Maharaja Chamarajendra Wodeyar Bahadur to commemorate the visit to Mysore of the right Hon'ble the Earl of Duffenin KPC CEB CCM, CFCH Viceroy and Governor General of India, 1st Dec AD 1886ರ ಎಂಬುದನ್ನು ಒಳಗೊಂಡಿದೆ. ಇವುಗಳ ಪ್ರಕಾರ ಡಫರಿನ್ ನೆನಪಿನಾರ್ಥ ನಿರ್ಮಾಣವಾದುದು ಎಂಬುದು ತಿಳಿದುಬರುತ್ತದೆ. ಈ ಗೋಪುರದಲ್ಲಿ ನಾಲ್ಕು ಕಂಬಗಳು, ಗೋಪುರವನ್ನು ಹಂತ–ಹಂತವಾಗಿ ಆಕರ್ಷಣೀಯವಾಗಿ ಕಟ್ಟಲಾಗಿದೆ. ಈ ಕಂಬಗಳ ಮಧ್ಯಭಾಗದಲ್ಲಿ ಜಲಯಂತ್ರವನ್ನು ಅಳವಡಿಸಿರುವುದನ್ನು ನಾವು ಕಾಣಬಹುದು.[4]

**ದೊಡ್ಡಗಡಿಯಾರ**

ಮೈಸೂರಿನಲ್ಲಿ ಜನತೆಯನ್ನು ಅತ್ಯಾಕರ್ಷಿಸುವಂತಹ ಕಟ್ಟಡವೆಂದರೆ ದೊಡ್ಡಗಡಿಯಾರ. ಏಕೆಂದರೆ ಮೈಸೂರಿನ ಜನತೆಯು ಸರ್ಕಾರಿ ಕಛೇರಿ, ಶಾಲಾ ಕಾಲೇಜು ವಿದ್ಯಾರ್ಥಿಗಳು ಸಾರ್ವಜನಿಕರು ದೊಡ್ಡ

ಗಡಿಯಾರದಿಂದ ಹೊರಹೊಮ್ಮುತ್ತಿದ್ದ ಗಂಟೆಯ ಸದ್ದಿನಿಂದ ತಮ್ಮ ದಿನನಿತ್ಯದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು ಮತ್ತು ಅಂದಿನ ಸನ್ನಿವೇಶದಲ್ಲಿ ಈ ಗಡಿಯಾರವನ್ನು ಅವಲಂಬಿಸಿದರು. ಇದು ಅರಮನೆಯ ಸಮೀಪದಲ್ಲಿಯೇ ಇದೆ. ಇಂತಹ ಗೋಪುರವು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ನಿರ್ಮಾಣವಾಯಿತು. ಅಂದರೆ ಮನ್ಮಹರಾಜರಾದ ನಾಲ್ಕನೇ ಕೃಷ್ಣರಾಜ ಒಡೆಯರ್‌ರವರು ತಮ್ಮ ಆಳ್ವಿಕೆಯ ಇಪ್ಪತ್ತೈದು ವರ್ಷಗಳು ತುಂಬಿದುದರ ನೆನಪಾರ್ಥವಾಗಿ ಮಾರ್ಚ್ 08, 1927ರಂದು ಇದನ್ನು ಸ್ಥಾಪಿಸಲಾಗಿದೆ.[5] ಇದು ಇಂಡೋ ಸಾರ್ಸನಿಕ್ ಶಿಲ್ಪಕಲಾ ಶೈಲಿಯನ್ನು ಹೊಂದಿದೆ. ಆರಂಭದ ಕಾಲದಲ್ಲಿನ ಆಂಗ್ಲ ಚರ್ಚಿನ ವಿನ್ಯಾಸವನ್ನು ಹೊಂದಿದೆ. ರಾಜಧಾನಿಯ ಮಾದರಿಯ ಗುಮ್ಮಟವನ್ನು ಹೊಂದಿದೆ ಹಾಗೂ ಐದು ಅಡಿ ವಿಶಾಲವಾಗಿದ್ದು ಪ್ರಾರಂಭದಲ್ಲಿ ರೋಮನ್ ಅಂಕಿಗಳಿದ್ದವು. ಇತ್ತೀಚೆಗೆ ಕನ್ನಡ ಅಂಕಿಗಳಿಗೆ ಬದಲಾಯಿಸಲಾಗಿದೆ. ಇದನ್ನು ಫ್ರಾನ್ಸ್ ಮೂಲದ ಎಲ್‌ಟೆರಿಲಿಯನ್ ಕಂಪನಿ ತಯಾರು ಮಾಡಿದ್ದುದಾಗಿದೆ. ಈ ಗಡಿಯಾರ ಗೋಪುರವನ್ನು ರಜಮಹತೋತ್ಸವ ಸ್ಮಾರಕವಾಗಿ ನಿರ್ಮಿಸಿದೆ ಹಾಗೂ ಪರಂಪರೆಯನ್ನು ಸೆಲೆ–ಸೆಲೆಯಾಗಿ ಬಿಚ್ಚಿಡುತ್ತದೆ. ಇದನ್ನು ಅರಮನೆಯ ಸರದಾರರು, ಅಧಿಕಾರಿಗಳು, ಅರಸರುಗಳು, ವಿದ್ವಾಂಸರುಗಳು, ಸೇನಾಧಿಕಾರಿಗಳು, ಸೈನಿಕರು, ಕಾರ್ಯಭಾರಿಗಳು, ಇತರ ಉದ್ಯೋಗಿಗಳು ಸೇರಿ ನಿರ್ಮಿಸಿರುವಂತದು.[6] ಈ ಸ್ಥಳಕ್ಕೆ ಭೇಟಿ ನೀಡಿ ಸಮಯದಲ್ಲಿ ಕೆಳಭಾಗದಲ್ಲಿ ಬರಹಗಳು ಕಾಣಸಿಗುತ್ತವೆ. ಈ ಗೋಪುರದ ಉತ್ತರ ಭಾಗಕ್ಕೆ ಸಂಸ್ಕೃತ, ದಕ್ಷಿಣ ಭಾಗದಲ್ಲಿ ಉರ್ದು, ಪೂರ್ವಕ್ಕೆ ಇಂಗ್ಲಿಷ್, ಪಶ್ಚಿಮ ಭಾಗದಲ್ಲಿ ಕನ್ನಡದಲ್ಲಿದೆ. ಇವುಗಳ ಪ್ರಕಾರ ಇಪ್ಪತ್ತೈದನೆಯ ಆಳ್ವಿಕೆ ವರ್ಷದ ಮಹೋತ್ಸವದ ಗಡಿಯಾರ ಗೋಪುರ "ಶಾಲಿವಾಹನಶಕ' 1824–1849 ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕದ 1866ನೇ ವರ್ಷಕ್ಕೆ ಸರಿಯಾದ ತಾರ ಸಂವತ್ಸರದ ಜೇಷ್ಠ ಶುಕ್ಲೈಕಾದಶಿಯಲ್ಲಿ ಅವತರಿಸಿಯೂ, ಲೋಕವಿಖ್ಯಾತರಾಗಿ ಕೀರ್ತಿ ಶೇಷರೆನಿಸಿದ ತಮ್ಮ ತಂದೆಯವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಅನಂತರ ಜಯಸಂವತ್ಸರದ ಮಾಘಶುಕ್ಲ ಸಪ್ತಮಿಯಲ್ಲಿ ಪಟ್ಟಾಭಿಷಕ್ತರಾಗಿಯು ತಮ್ಮ ಮಹಾಮಾತೃಶ್ರೀಯವರಾದ ಶ್ರೀ ಮನ್ಮರಾಜ್ಞಿರೀಜೆಂಟರು ವಾಣಿವಿಲಾಸ ಮಹಾಸನ್ನಿಧಾನದಿಂದ ಶುಭಕೃತು ಶ್ರಾವಣ ಶುಕ್ಲ ಪಂಚಮಿ ಶುಕ್ರವಾರದಂದು ರಾಜ್ಯಭಾರವನ್ನು ವಹಿಸಿ ಅಸಾಧಾರಣವಾದ ವಿವೇಕದಿಂದಲೂ, ಉಪಶಾಂತಿಯಿಂದಲೂ ಅಸದೃಶವಾದ ಪ್ರಜಾವಾತ್ಸಲ್ಯದಿಂದಲೂ, ಭರತಖಂಡದಲ್ಲಿಯೇ ಪ್ರಖ್ಯಾತವಾದ ಈ ಮಹಾಸಂಸ್ಥಾನದ ಭಾಗ್ಯಶ್ರೀಯನ್ನು ರೂಪುಗೊಳಿಸಿ ಸುಪರಿಣಾಮವಾಗುವಂತೆ ಮುಂಬರಿಯಿಸುತ್ತ ಮೈಸೂರು ಚರಿತ್ರೆಯಲ್ಲಿ ಚಿನ್ನದಂತ ಕಾಲವೆಂದು ಪರಿಗಣಿಸಲ್ಪಟ್ಟ ನಾಲ್ವಡಿಯವರ ರಜಮಹೋತ್ಸವದ ಸ್ಮಾರಕವಾಗಿರುವಂತೆ ಅರಮನೆ ಸಿಬ್ಬಂದಿ ವರ್ಗ ಮತ್ತು ಹಿತೈಷಿಗಳು ಅತಿಶಯವಾದ ರಾಜಭಕ್ತಿಯ, ವಿಶ್ವಾಸಗಳ ಫಲವಾಗಿ ಇದು ನಿರ್ಮಿತವಾಗಿದೆ.[7]

**ಉಪಸಂಹಾರ**

ಒಟ್ಟಾರೆ ಮೈಸೂರು ಅರಸರ ಸಾಧನೆ ಮತ್ತು ಅವರ ಗೌರವಾರ್ಥವಾಗಿ ನಿರ್ಮಿಸಿರುವ ಸ್ಮಾರಕಗಳು ಮೈಸೂರು ನಗರದ ಆಕರ್ಷಣೀಯ ತಾಣಗಳಾಗಿವೆ ಹಾಗೂ ಮೈಸೂರಿನ ಸೌಂದರ್ಯವನ್ನು ಹೆಚ್ಚಿಸಿವೆ. ಈ ಹಿನ್ನಲೆಯಲ್ಲಿ ನೋಡುವುದಾದರೆ ಮೈಸೂರಿನಲ್ಲಿ ಇನ್ನೂ ಹಲವಾರು ಸ್ಮಾರಕಗಳು ಕಂಡುಬರುತ್ತವೆ. ಇವು ಮೈಸೂರಿನ ಹಿರಿಮೆ ಮತ್ತು ಗರಿಮೆಯನ್ನು ಸಾರುತ್ತವೆ.

**ಕೊನೆಟಿಪ್ಪಣಿಗಳು**


1. ಗೋಪಾಲ್ ಆರ್. (ಸಂ.) (2012). ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ಪು.ಸಂ.466.
2. ಅದೇ. ಪು.ಸಂ. 466–467
3. ರಾಜೇಂದ್ರ ಪಿ. ಕೆ., ಚ.ಸರ್ವಮಂಗಳ, ತಾರನಾಥ್ ಎನ್.ಎಸ್ (ಸಂ.) (2011). ಮೈಸೂರು ದರ್ಶನ (ಸಂ.1) ಪ್ರಸಾರಾಂಗ, ಕ.ರ.ಮು.ವಿ., ಮಾನಸಗಂಗೋತ್ರಿ, ಮೈಸೂರು. ಪು.ಸಂ.379.
4. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ
5. ಪೂರ್ವೋಕ್ತ–1, ಪು.ಸಂ. 467.
6. ಪೂರ್ವೋಕ್ತ–3, ಪು.ಸಂ.381.
7. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ